

بسم اللهِ الرّحمٰن الرّحيم

# ಹಝ್ರ‌ತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–07–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ۔

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರ‌ತ್ ಉಮರ್(ರ) ಖಝಾ (ನ್ಯಾಯಾಂಗ) ವಿಭಾಗವನ್ನು ಜಾರಿಗೊಳಿಸಿದರು. ಎಲ್ಲ ಜಿಲ್ಲೆಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಿದರು ಮತ್ತು ಖಾಝಿಗಳನ್ನು (ನ್ಯಾಯಾಧೀಶರನ್ನು) ನಿಶ್ಚಯಿಸಿದರು. ಖಾಝಿಗಳನ್ನು ಆಯ್ಕೆ ಮಾಡುವಾಗ ಫಿಖಃ (ಕರ್ಮಶಾಸ್ತ್ರ) ಪಂಡಿತರನ್ನು ಆಯ್ಕೆ ಮಾಡಿದರು. ಅವರ ಪರೀಕ್ಷೆ ನಡೆಸುತ್ತಿದ್ದರು. ಅವರಿಗೆ ಉತ್ತಮ ಸಂಬಳವನ್ನು ನಿಶ್ಚಯಿಸುತ್ತಿದ್ದರು. ಯಾರನ್ನೂ ಭಯಪಡದಿರಲು ಮತ್ತು ಯಾರ ಪ್ರಭಾವಕ್ಕೂ ಒಳಪಡದಿರಲಿಕ್ಕಾಗಿ ಶ್ರೀಮಂತ ಮತ್ತು ಗೌರವಾನ್ವಿತ ವ್ಯಕ್ತಿಗಳನ್ನು ಖಾಝಿಗಳನ್ನಾಗಿ ನಿಶ್ಚಯಿಸಲಾಗುತ್ತಿತ್ತು. ಸಮಾನತೆ ಮತ್ತು ನ್ಯಾಯಕ್ಕೆ ಹಝ್ರ‌ತ್ ಉಮರ್(ರ) ಬಹಳ ಬೆಲೆಕೊಡುತ್ತಿದ್ದರು. ಒಂದು ಬಾರಿ ಹಝ್ರ‌ತ್ ಉಬಯ್ಯ್ ಬಿನ್ ಕಅ್‌ಬ್‌ರೊಡನೆ ಹಝ್ರ‌ತ್ ಉಮರ್‌ರಿಗೆ ಇದ್ದ ಒಂದು ವ್ಯಾಜ್ಯ ಹಝ್ರ‌ತ್ ಝೈದ್ ಬಿನ್ ಸಾಬಿತ್‌ರ ನ್ಯಾಯಾಲಯದ ಮುಂದೆ ಬಂತು. ಉಭಯ ಕಕ್ಷಿದಾರರನ್ನು ಹಝ್ರ‌ತ್ ಝೈದ್(ರ) ಕರೆಯಿಸಿದರು ಮತ್ತು ಹಝ್ರ‌ತ್ ಉಮರ್(ರ)ರಿಗೆ ಗೌರವ ಸೂಚಿಸಿದರು. ಆಗ ಹಝ್ರ‌ತ್ ಉಮರ್(ರ) ಹೇಳಿದರು: ಇದು ನಿನ್ನ ಮೊದಲ ಅನ್ಯಾಯವಾಗಿದೆ. ಹೀಗೆ ಹೇಳಿಕೊಂಡು ಅವರು ಹಝ್ರ‌ತ್ ಉಬಯ್ಯ್(ರ)ರ ಬಳಿ ಹೋಗಿ ಕುಳಿತುಕೊಂಡರು.

ಹಝ್ರ‌ತ್ ಉಮರ್(ರ) ಕರ್ಮಶಾಸ್ತ್ರ (ಇಫ್‌ತಾ) ವಿಭಾಗವನ್ನು ಸಹ ಜಾರಿಗೊಳಿಸಿದರು. ಹೀಗೆ ಹಝ್ರ‌ತ್ ಅಲಿ(ರ), ಹಝ್ರ‌ತ್ ಉಸ್ಮಾನ್(ರ), ಹಝ್ರ‌ತ್ ಮುಆಧ್ ಬಿನ್ ಜಬಲ್(ರ), ಹಝ್ರ‌ತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರ‌ತ್ ಉಬಯ್ಯ್ ಬಿನ್ ಕಅ್‌ಬ್(ರ), ಹಝ್ರ‌ತ್ ಝೈದ್ ಬಿನ್ ಸಾಬಿತ್(ರ), ಹಝ್ರ‌ತ್ ಅಬೂಹುರೈರ(ರ), ಹಝ್ರ‌ತ್ ಅಬೂದರ್‌ದ(ರ) ಎಂಬೀ ಸಹಾಬರನ್ನು ನೇಮಕ ಮಾಡಿ, ಇವರಲ್ಲದೇ ಬೇರೆ ಯಾರಿಂದಲೂ ಫತ್ವ ಅಥವಾ ಧರ್ಮಶಾಸ್ತ್ರ ವಿಧಿಯನ್ನು ಪಡೆಯಲಾಗದು ಎಂದು ಹೇಳಿದರು.

ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರ‌ತ್ ಉಮರ(ರ)ರ ಖಿಲಾಫತ್ ಕಾಲದಲ್ಲಿ ಶ್ರೇಷ್ಠ ಸಹಾಬಿಯಾದ, ಬಹುಶಃ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಆಗಿರಬೇಕು, ಅವರು ಒಂದು ಬಾರಿ ಯಾವುದೋ ಒಂದು ಧರ್ಮವಿಧಿಯ ಬಗ್ಗೆ ಜನರಿಗೆ ಹೇಳಿದರು. ಈ ಸುದ್ದಿ ಹಝ್ರ‌ತ್ ಉಮರ್‌ರಿಗೆ ತಲುಪಿದಾಗ, ತಕ್ಷಣವೇ ಅವರನ್ನು ಕರೆದು ಇದರ ಬಗ್ಗೆ ಪ್ರಶ್ನಿಸಿದರು. ನೀವು ಅಮೀರರೇ? ಅಥವಾ ಅಮೀರ್ ನಿಮ್ಮನ್ನು ಫತ್ವ ನೀಡಲು ನಿಶ್ಚಯಿಸಿರುವರೇ? ಎಂದು ಕೇಳಿದರು. ಸತ್ಯದಲ್ಲಿ, ಪ್ರತಿಯೊಬ್ಬರಿಗೂ ಫತ್ವ ನೀಡುವ ಹಕ್ಕಿದ್ದರೆ, ಅನೇಕ ತೊಂದರೆಗಳು ಉಂಟಾಗಬಹುದು. ಜನಸಾಮಾನ್ಯರು ಹಲವಾರು ಫತ್ವಗಳಿಂದ ಗೊಂದಲಕ್ಕೆ ಈಡಾಗುವರು.

ದೇಶದಲ್ಲಿ ಶಾಂತಿ ನೆಲೆಸಲಿಕ್ಕಾಗಿ ಹಝ್ರ‌ತ್ ಉಮರ್(ರ) ಪೋಲೀಸ್ ವಿಭಾಗವನ್ನು ಸ್ಥಾಪಿಸಿದರು. ಜೈಲುಗಳನ್ನು ಸಹ ನಿರ್ಮಿಸಿದರು. ಹಿಜರೀ 15ರಲ್ಲಿ ಬಹ್ರೈನ್‌ನಿಂದ ಐದು ಲಕ್ಷದಷ್ಟು ಹಣ ಬಂದಾಗ ಸಹಾಬರೊಂದಿಗೆ ಸಮಾಲೋಚನೆ ನಡೆಸಿಕೊಂಡು ಮದೀನದಲ್ಲಿ ಬೈತುಲ್‌ಮಾಲ್ ಸ್ಥಾಪನೆಮಾಡಲಾಯಿತು. ಹಝ್ರ‌ತ್ ಅಬ್ದುಲ್ಲಾಹ್ ಬಿನ್ ಅರ್ಖಮ್‌ರನ್ನು ಖಜಾನೆಯ ಆಫೀಸರ್ ಆಗಿ ನಿಶ್ಚಯಿಸಲಾಯಿತು. ಹಝ್ರ‌ತ್ ಉಮರ್(ರ) ಸಾಮಾನ್ಯವಾಗಿ ಕಟ್ಟಡ ನಿರ್ಮಾಣದ ಕೆಲಸದಲ್ಲಿ ಮಿತವ್ಯಯ ಮಾಡುತ್ತಿದ್ದರು. ಆದರೆ ಬೈತುಲ್‌ಮಾಲಿಗಾಗಿ ಅವರು ಅತ್ಯಂತ ವೈಭವಶಾಲಿ ಕಟ್ಟಡವನ್ನು ನಿರ್ಮಿಸಿದರು ಮತ್ತು ಅದಕ್ಕೆ ಕಾವಲುಗಾರರನ್ನು ಸಹ ನಿಶ್ಚಯಿಸಿದರು. ಒಂದು ಸಲ ಕಠಿಣವಾದ ಸೆಖೆಯಿದ್ದ ದಿನದಂದು ಹಝ್ರ‌ತ್ ಉಸ್ಮಾನ್ ಬಿನ್ ಅಫ್ಫಾನ್(ರ) ತಾನು ಸ್ವತಂತ್ರಗೊಳಿಸಿದ ಗುಲಾಮನ ಜೊತೆಗೆ ನಜದಿನ ಕಡೆಯಿರುವ 'ಆಲಿಯ' ಎಂಬ ಸ್ಥಳದಲ್ಲಿ ಇದ್ದರು. ಮುಂದಿನಿಂದ ಎರಡು ಯುವ ಒಂಟೆಗಳನ್ನು ಅಟ್ಟಿಸುತ್ತಾ ಒಬ್ಬ ವ್ಯಕ್ತಿ ಹೋಗುತ್ತಿರುವುದನ್ನು ಅವರು ನೋಡಿದರು. ಹಝ್ರ‌ತ್ ಉಸ್ಮಾನ್(ರ) ಹೇಳಿದರು: ಆ ವ್ಯಕ್ತಿಗೆ ಏನಾಗಿದೆ? ಅವರು ಮದೀನದಲ್ಲಿ ಇದ್ದುಕೊಂಡು ಹವಾಮಾನ ತಂಪುಗೊಂಡ ನಂತರ ಹೊರಟಿದ್ದರೆ ಒಳ್ಳೆಯದಾಗಿತ್ತು. ಆ ವ್ಯಕ್ತಿ ಸಮೀಪಕ್ಕೆ ಬಂದಾಗ, ಅದು ಅಮೀರುಲ್ ಮೂಅ್‌ಮಿನೀನ್ ಹಝ್ರ‌ತ್ ಉಮರ್ ಬಿನ್ ಖತ್ತಾಬ್(ರ) ಎಂದು ಗೊತ್ತಾಯಿತು. ಹಝ್ರ‌ತ್ ಉಮರ್(ರ) ಹೇಳಿದರು: ಸದಖದ ಒಂಟೆಗಳಲ್ಲಿ ಈ ಎರಡು ಒಂಟೆಗಳು ಹಿಂದೆ ಬಾಕಿಯುಳಿದಿದ್ದುವು. ಈ ಎರಡು ಒಂಟೆಗಳು ಕಾಣೆಯಾದರೆ ಅಲ್ಲಾಹನು ಇವುಗಳ ಬಗ್ಗೆ ನನ್ನೊಡನೆ ಕೇಳುವನು ಎಂಬ ಭಯ ನನಗೆ ಉಂಟಾಯಿತು. ಹಝ್ರ‌ತ್ ಉಸ್ಮಾನ್(ರ) ಹೇಳಿದರು: ಯಾರಾದರೂ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿಯನ್ನು ನೋಡಲು ಬಯಸುವನಾದರೆ, ಹಝ್ರ‌ತ್ ಉಮರ್(ರ)ರನ್ನು ನೋಡಲಿ.

ಬೇರೊಂದು ವರದಿಯಲ್ಲಿ ಹೀಗೆ ಬರುತ್ತದೆ: ಅಬೂಬಕರ್‌ಈಸಾರಿಂದ ಉಮರ್ ಬಿನ್ ನಾಫೀ ವರದಿ ಮಾಡುತ್ತಾರೆ. ನಾನು ಹಝ್ರ‌ತ್ ಉಮರ್ ಬಿನ್ ಖತ್ತಾಬ್(ರ),

ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಮತ್ತು ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ)ರೊಂದಿಗೆ ಸದಖ ಮಾಡುವ ಸಮಯದಲ್ಲಿ ಹೋದೆನು. ಹಝ್ರತ್ ಉಸ್ಮಾನ್(ರ) ನೆರಳಿನಲ್ಲಿ ಕುಳಿತುಕೊಂಡರು. ಹಝ್ರತ್ ಅಲಿ(ರ) ಅವರ ಬಳಿಯಲ್ಲಿ ನಿಂತುಕೊಂಡು ಹಝ್ರತ್ ಉಮರ್(ರ) ಹೇಳುತ್ತಿದ್ದ ಮಾತುಗಳನ್ನು ಅವರಿಗೆ ಹೇಳಿಕೊಡುತ್ತಿದ್ದರು. ಹಝ್ರತ್ ಉಮರ್(ರ) ಕಠಿಣವಾದ ಬಿಸಿಲಿನ ದಿನವಾಗಿದ್ದು ಕೂಡ ಬಿಸಿಲಿನಲ್ಲಿ ನಿಂತುಕೊಂಡಿದ್ದರು. ಅವರ ಬಳಿಯಲ್ಲಿ ಎರಡು ಕಪ್ಪು ಚಾದರವಿತ್ತು. ಒಂದನ್ನು ಲುಂಗಿಯಾಗಿ ಧರಿಸಿದ್ದರು ಮತ್ತೊಂದನ್ನು ತಲೆಯಲ್ಲಿ ಧರಿಸಿದ್ದರು. ಸದಖದ ಒಂಟೆಗಳನ್ನು ಪರಿಶೋಧಿಸುತ್ತಿದ್ದರು. ಒಂಟೆಗಳ ಬಣ್ಣ ಮತ್ತು ವಯಸ್ಸನ್ನು ಬರೆಯುತ್ತಿದ್ದರು. ಹಝ್ರತ್ ಅಲಿ(ರ) ಹಝ್ರತ್ ಉಸ್ಮಾನ್(ರ)ರೊಡನೆ ಹೇಳಿದರು: ಅಲ್ಲಾಹನ ಗ್ರಂಥದಲ್ಲಿ ನೀವು ಹಝ್ರತ್ ಶುಐಬ್(ರ)ರ ಮಗಳ ಹೇಳಿಕೆಯನ್ನು ಕೇಳಿದ್ದೀರಿ ಅಲ್ಲವೇ? **ಇನ್ನ ಖೈರ ಮನಿಸ್ತಅ್‌ಜರ್‌ತಲ್ ಖವಿಯ್ಯುಲ್ ಅಮೀನ್**. ಎಂದರೆ, ಖಂಡಿತವಾಗಿಯೂ ನೀವು ಯಾರನ್ನು ಕೆಲಸಕ್ಕಾಗಿ ಇಡುವರಾದರೂ ಅವರಲ್ಲಿ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿಯೇ ಅತ್ಯಂತ ಉತ್ತಮನಾಗಿರುವನು. ಅನಂತರ ಹಝ್ರತ್ ಅಲಿ(ರ) ಹಝ್ರತ್ ಉಮರ್(ರ)ರ ಕಡೆಗೆ ಬೊಟ್ಟು ಮಾಡುತ್ತಾ ಹೇಳಿದರು: ಇವರೇ ಆ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿ.

ಒಂದು ಸಲ ಹಝ್ರತ್ ಉಮರ್(ರ) ಬೈತುಲ್‌ಮಾಲಿನಿಂದ ಸ್ವಲ್ಪ ಸಂಪತ್ತನ್ನು ವಿತರಿಸುತ್ತಿದ್ದರು. ಅಷ್ಟರಲ್ಲಿ ಅವರ ಮಗಳು ಬಂದಳು ಮತ್ತು ಒಂದು ದಿರ್ಹಮನ್ನು ತನ್ನ ಬಾಯಿಗೆ ಹಾಕಿದಳು. ಹಝ್ರತ್ ಉಮರ್(ರ) ಅವಳ ಬಾಯಿಗೆ ಬೆರಳು ಹಾಕಿ ಆ ದಿರ್ಹಮನ್ನು ಹೊರಗೆ ತೆಗೆದರು ಮತ್ತು ಹೀಗೆ ಹೇಳಿದರು: ಎಲೈ ಜನರೇ, ಉಮರ್ ಮತ್ತು ಅವರ ಕುಟುಂಬಕ್ಕೆ ಸಾಮಾನ್ಯ ಮುಸ್ಲಿಮರಿಗೆ ಇರುವ ಅದೇ ಹಕ್ಕು ಲಭಿಸುವುದು. ಅದೇ ರೀತಿಯಲ್ಲಿ, ಒಂದು ಬಾರಿ ಹಝ್ರತ್ ಅಬೂಮೂಸಾ(ರ) ಬೈತುಲ್‌ಮಾಲಿನಲ್ಲಿ ಗುಡಿಸುತ್ತಿದ್ದಾಗ ಅವರಿಗೆ ಒಂದು ದಿರ್ಹಂ ಸಿಕ್ಕಿತು. ಅದೇ ಸಮಯ ಹಝ್ರತ್ ಉಮರ್(ರ)ರ ಒಬ್ಬ ಕಿರಿಯ ಪುತ್ರ ಅಲ್ಲಿಂದ ಸಾಗುತ್ತಿದ್ದನು. ಅಬೂ ಮೂಸಾ ಅದನ್ನು ಅವನಿಗೆ ಕೊಟ್ಟರು. ಹಝ್ರತ್ ಉಮರ್(ರ) ಆ ದಿರ್ಹಮನ್ನು ಮಗುವಿನ ಕೈಯಲ್ಲಿ ನೋಡಿದಾಗ ಅದರ ಬಗ್ಗೆ ಪ್ರಶ್ನಿಸಿದರು. ಅನಂತರ ಅಬೂಮೂಸಾರೊಡನೆ ಹೇಳಿದರು: ಹೇ ಅಬೂಮೂಸಾ ಮದೀನ ನಿವಾಸಿಗಳಲ್ಲಿ ಉಮರ್‌ನ ಮನೆಗಿಂತ ದರಿದ್ರ ಮನೆ ನಿನ್ನ ಪ್ರಕಾರ ಬೇರೆ ಇಲ್ಲವೇ?

ಜನಸಾಮಾನ್ಯರ ಏಳಿಗೆಗಾಗಿ ಮಾಡಲಾದ ಕೆಲಸಗಳಲ್ಲಿ ಹಝ್ರತ್ ಉಮರ್(ರ) ನೀರಿನ ಸರಬರಾಜಿಗಾಗಿ ಕಾಲುವೆಗಳನ್ನು ತೋಡಿಸಿದರು. ಹಿಜರೀ 18ರಲ್ಲಿ ಬರಗಾಲ ಉಂಟಾದಾಗ, ಹಝ್ರತ್ ಉಮರ್(ರ)ರ ನಿರ್ದೇಶನ ಪ್ರಕಾರ ಹಝ್ರತ್ ಅಮ್ರ್ ಬಿನ್ ಆಸ್(ರ) ಫಿಸ್ತಾತ್‌ನಿಂದ ಖುಲ್ಝುಂ ನದಿಯ ತನಕ ಕಾಲುವೆಯನ್ನು ನಿರ್ಮಿಸಿದರು. ಅದರ ಮೂಲಕ ಹಡಗು ಮದೀನದ ಬಂದರು ಪ್ರದೇಶವಾದ ಜಿದ್ದ ವರೆಗೆ ತಲುಪುತ್ತಿತ್ತು.

ಹಝ್ರತ್ ಉಮರ್(ರ) ಜನಸಾಮಾನ್ಯರ ಸೌಕರ್ಯಕ್ಕಾಗಿ ಮಸೀದಿಗಳು, ನ್ಯಾಯಾಲಯಗಳು, ಸೈನಿಕ ಚಾವಣಿಗಳು, ಬೇರೆಕ್ಸ್, ರಸ್ತೆಗಳು, ಸೇತುವೆ, ಅತಿಥಿಗೃಹಗಳು, ಚೌಕಿಗಳನ್ನು ನಿರ್ಮಾಣ ಮಾಡಿಸಿದರು. ಅನೇಕ ಹೊಸ ಪಟ್ಟಣಗಳನ್ನು ಅಭಿವೃದ್ಧಿಗೊಳಿಸಿದರು. ಫಿಸ್ತಾತ್, ಬಸ್ರ, ಕೂಫ, ಇತ್ಯಾದಿ ಪಟ್ಟಣಗಳು ಇವುಗಳಲ್ಲಿ ಸೇರುತ್ತವೆ. ಹಝ್ರತ್ ಉಮರ್(ರ) ಸೈನ್ಯವನ್ನು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಿದರು. ಪದವಿಗಳಿಗೆ ಅನುಸಾರ ಸೈನಿಕರಿಗೆ ಸಂಬಳ ನಿಶ್ಚಯಿಸಿದರು. ಅವರಿಗೆ ಸೈನಿಕರ ತರಬೇತು ಬಗ್ಗೆ ಬಹಳ ಕಾಳಜಿಯಿತ್ತು. ವಶಪಡಿಸಲಾದ ದೇಶಗಳಲ್ಲಿ ಯಾವನೇ ವ್ಯಕ್ತಿ ಕೃಷಿ ಅಥವಾ ವ್ಯಾಪಾರವನ್ನು ಮಾಡಬಾರದು ಎಂದು ಹಝ್ರತ್ ಉಮರ್(ರ) ತಾಕೀತು ಮಾಡಿದ್ದರು. ಇಂದು ಮುಸ್ಲಿಮರ ದೇಶಗಳಲ್ಲಿ ಸೈನಿಕರು ವ್ಯಾಪಾರದಲ್ಲಿ ನಿರತರಾಗಿರುತ್ತಾರೆ. ಮಾತ್ರವಲ್ಲ ಒಂದು ದೇಶದಲ್ಲಿ ಕಮೀಶನ್ ಪಡೆಯುತ್ತಲೇ ಎಲ್ಲಿ ಪ್ಲಾಟ್ ಅಲಾಟ್ ಮಾಡಿಸಬೇಕು ಎಂದು ಆಫೀಸರರು ನೋಡುತ್ತಾರೆ ಎಂದು ಹೇಳಲಾಗುತ್ತದೆ. ಹೀಗೆ ಅವರ ಸೈನಿಕ ಕೌಶಲಗಳು ಕಡಿಮೆಯಾಗುತ್ತಿವೆ. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ, ತಂಪು ಮತ್ತು ಉಷ್ಣ ದೇಶಗಳನ್ನು ಆಕ್ರಮಣ ನಡೆಸುವಾಗ ಅಲ್ಲಿಯ ಹವಾಮಾನದ ಬಗ್ಗೆ ಗಮನವಹಿಸಲಾಗುತ್ತಿತ್ತು. ಸಿಪಾಯಿಗಳನ್ನು ತರಬೇತಿ ಮತ್ತು ಆಯುಧಗಳಿಂದ ಸಜ್ಜುಗೊಳಿಸುತ್ತಿದ್ದರು.

ಇಸ್ಲಾಮಿಕ ಆಡಳಿತದ ಅಡಿಯಲ್ಲಿ ಅನ್ಯ ಸಮುದಾಯಗಳ ವ್ಯಕ್ತಿಗಳು ಸಹ ಉನ್ನತ ಹುದ್ದೆಗಳಲ್ಲಿ ಇದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಸೇನೆಯನ್ನು ವಿಪುಲಗೊಳಿಸುವಾಗ ಯಾವುದೇ ಸಮುದಾಯ ಮತ್ತು ದೇಶಕ್ಕೆ ವಿಶೇಷ ಸ್ಥಾನ ನೀಡಿರಲಿಲ್ಲ. ಸ್ವಯಂ ಸೇವಕ ಸೈನ್ಯದಲ್ಲಿ ಸಾವಿರಾರು ಅಗ್ನಿಪೂಜಕರು ಇದ್ದರು. ಅನ್ಯ ಸಮುದಾಯಗಳ ವ್ಯಕ್ತಿಗಳನ್ನು ಹಝ್ರತ್ ಉಮರ್(ರ) ಸೇನಾಧಿಪತಿಗಳನ್ನಾಗಿ ನಿಶ್ಚಯಿಸುತ್ತಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ.

ವಸ್ತುಗಳ ಬೆಲೆಗಳನ್ನು ಅನ್ಯಾಯವಾಗಿ ಕಡಿಮೆಗೊಳಿಸುವುದನ್ನು ಹಝ್ರತ್ ಉಮರ್(ರ) ಕಠಿಣವಾಗಿ ತಡೆದಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬೆಲೆಯೇರಿಕೆಯನ್ನೂ ಅದೇ ರೀತಿಯಲ್ಲಿ ಇತರರಿಗೆ ನಷ್ಟವುಂಟಾಗುವ ರೀತಿಯಲ್ಲಿ ಬೆಲೆಯನ್ನು ಕಡಿಮೆಗೊಳಿಸುವುದನ್ನೂ ಇಸ್ಲಾಂ ವಿರೋಧಿಸುತ್ತದೆ.

ಶಿಕ್ಷಣದ ವ್ಯವಸ್ಥೆಯನ್ನು ಹಝ್ರತ್ ಉಮರ್(ರ) ಬಹಳವಾಗಿ ಅಭಿವೃದ್ಧಿಗೊಳಿಸಿದರು. ಎಲ್ಲ ಪ್ರದೇಶಗಳಲ್ಲಿ ಮದ್ರಸಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಪವಿತ್ರ ಖುರ್‌ಆನ್, ಹದೀಸ್, ಫಿಖವನ್ನು ಕಲಿಸಲಾಗುತ್ತಿತ್ತು. ಶ್ರೇಷ್ಠ ಪಂಡಿತರಾದ ಸಹಾಬರನ್ನು ಶಿಕ್ಷಣ ಮತ್ತು ತರಬೇತಿಗಾಗಿ ನೇಮಕಮಾಡಲಾಗುತ್ತಿತ್ತು. ಅಧ್ಯಾಪಕರ ಸಂಬಳವನ್ನು ಸಹ ನಿಶ್ಚಯಿಸಲಾಗಿತ್ತು.

ಹಿಜರೀ ಕ್ಯಾಲೆಂಡರನ್ನು ಹಝ್ರತ್ ಉಮರ್(ರ) ಶುರುಮಾಡಿದರು. ಅದರ ಆರಂಭವನ್ನು ಹಝ್ರತ್

ಪೈಗಂಬರ್(ಸ)ರ ಮದೀನ ಹಿಜ್ರತ್‌ನಿಂದ ಮಾಡಲಾಗಿತ್ತು. ಈ ಕ್ಯಾಲೆಂಡರ್ ಯಾವಾಗ ಶುರುವಾಯಿತು ಎಂಬುದರ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಇವೆ. ಹಿಜರೀ 16ರಲ್ಲಿ ಇದರ ಆರಂಭವಾಯಿತು ಎಂದು ಕೆಲವರು ಹೇಳುತ್ತಾರೆ. ಕೆಲವರ ಅಭಿಪ್ರಾಯದಲ್ಲಿ, ಹಿಜರೀ 17, ಹಿಜರೀ 18 ಅಥವಾ ಹಿಜರೀ 21ರಲ್ಲಿ ಈ ಕ್ಯಾಲೆಂಡರ್ ಶುರುವಾಯಿತು.

ಇಸ್ಲಾಮಿಕ ನಾಣ್ಯದ ಕುರಿತು ಸಾಮಾನ್ಯ ಚರಿತ್ರೆಗಾರರ ಅಭಿಪ್ರಾಯವೇನೆಂದರೆ, ಮೊತ್ತಮೊದಲ ನಾಣ್ಯ ಅಬ್ದುಲ್‌ಮಲಿಕ್ ಬಿನ್ ಮರ್‌ವಾನ್ ಜಾರಿಗೊಳಿಸಿದ್ದರು ಎಂದಾಗಿದೆ. ಆದರೆ ಇಸ್ಲಾಮಿಕ ನಾಣ್ಯ ಹಝ್ರತ್ ಉಮರ್(ರ)ರ ಕಾಲದಲ್ಲಿ ಜಾರಿಯಾಯಿತು ಎಂದು ಮದೀನದ ಕೆಲವು ಚರಿತ್ರೆಗಾರರು ಹೇಳುತ್ತಾರೆ. ಅವುಗಳಲ್ಲಿ ಕೆಲವು ನಾಣ್ಯಗಳಲ್ಲಿ **ಅಲ್‌ಹಮ್ದುಲಿಲ್ಲಾಹ್**, ಕೆಲವಲ್ಲಿ **ಮುಹಮ್ಮದುರ್ರಸೂಲುಲ್ಲಾಹ್** ಮತ್ತು ಕೆಲವಲ್ಲಿ **ಲಾ ಇಲಾಹ ಇಲ್ಲಲ್ಲಾಹ್ ವಹ್‌ದಹು** ಎಂದು ಕೆತ್ತಲಾಗಿದ್ದುವು. ಒಂದು ಸಂಶೋಧನೆ ಪ್ರಕಾರ ಮೊಟ್ಟಮೊದಲ ಇಸ್ಲಾಮಿಕ ನಾಣ್ಯ ಡಮಸ್ಕಸ್‌ನಲ್ಲಿ ಹಿಜರೀ 17ರಲ್ಲಿ ಜಾರಿಯಾಯಿತು.

ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲದಲ್ಲಿ ಆರಂಭಿಸಿದ ಹೊಸ ಸಂಗತಿಗಳನ್ನು ಚರಿತ್ರೆಗಾರರು **ಅವ್ವಲಿಯಾತ್** ಎಂದು ಹೇಳುತ್ತಾರೆ. ಅಲ್ಲಾಮ ಶಿಬ್‌ಲಿ ನುಮಾನಿ ತನ್ನ ಗ್ರಂಥವಾದ **'ಅಲ್‌ಫಾರೂಖ್'**ನಲ್ಲಿ ಸುಮಾರು 44 ಅವ್ವಲಿಯಾತನ್ನು ನಮೂದಿಸಿದ ನಂತರ – ಇದಲ್ಲದೆ ಹಝ್ರತ್ ಉಮರ್(ರ)ರ ಬೇರೆಯೂ ಅವ್ವಲಿಯಾತ್ ಇವೆ, ಅವುಗಳನ್ನು ಧೈರ್ಯ್ಯಭಯದ ಕಾರಣದಿಂದ ಪ್ರಸ್ತಾಪಿಸಲಾಗುತ್ತಿಲ್ಲ ಎಂದು ಹೇಳಿದ್ದಾರೆ.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹರು 6 ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝು ಗ್ಹಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, UK, On 09-07-2021*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon